ಮಾಡಿದ್ದೀರಿ? ಅದರ ಬಗ್ಗೆ ಹೇಳಿ, ಬರಿ ಬರೆಯುವವರು ಮಾತ್ರ ನಿಮ್ಮ ಕಣ್ಣಿಗೆ ಕಾಣಿಸುತ್ತಾರೆ? ಲೈನ್ ಮ್ಯಾನ್‌ಗಳು ಇಲ್ಲವೇ, ಅಥವಾ ಅದನ್ನು ನಡೆಸತಕ್ಕವರ ಮೇಲೆ ಏಕೆ ನೀವು ಕೇಸ್ ಹಾಕುವುದಿಲ್ಲ? ಏಕೆಂದರೆ ಅವರಿಂದ ಪೋಲೀಸ್‌ನವರಿಗೆ ನೇರವಾಗಿ ಹಫ್ತಾ ಸಿಗುತ್ತದೆ, ಈ ಬರೆಯತಕ್ಕವರು ಹಫ್ತಾ ಕೊಡುತ್ತಾ ಇಲ್ಲ. ಆದುದರಿಂದ ಇವತ್ತು ಮಟ್ಕಾ ನಡೆಸತಕ್ಕವರಿಗೆ ರಕ್ಷಣೆ ಇದೆ, ಮತ್ತು ಲೈನ್ ಮ್ಯಾನ್‌ಗಳಿಗೆ ರಕ್ಷಣೆ ಸಿಗುತ್ತಿದೆ. ಇದನ್ನು ಸಹ ತಾವು ಗಂಭೀರವಾಗಿ ಪರಿಗಣಿಸಬೇಕು.

ಶ್ರೀ ಆರ್. ರೋಷನ್ ಬೇಗ್ :- ಮಾನ್ಯ ಅಧ್ಯಕ್ಷರೆ, ಅನೇಕ ಮಾನ್ಯ ಸದಸ್ಯರುಗಳು ಅವರ ಕ್ಷೇತ್ರದಲ್ಲಿ ನಡೆಯತಕ್ಕ ಮಟ್ಕಾ, ಜೂಜು ಇವುಗಳ ಬಗ್ಗೆ ಹೇಳಿದ್ದಾರೆ. ನಾನು ಈ ಕೂಡಲೇ ಅಲ್ಲಿನ ಅಧಿಕಾರಿಗಳನ್ನು ಕರೆಸಿ, ಅವರ ಜೊತೆ ಚರ್ಚಿಸಿ, ಅಗತ್ಯ ಕ್ರಮವನ್ನು ಕೈಗೊಳ್ಳುತ್ತೇವೆ. ಆದರೆ ಒಂದು ಕಡೆ, ಅಂದರೆ ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ಈ ಗ್ಯಾಮ್ ಲಿಂಗ್, ಮಟ್ಕಾ ಜೂಜುಗಳನ್ನು ಶ್ರೀಮಂತರು ಹೋಗಿ ಆಡುತ್ತಾರೆ. ಅದು ಗ್ಯಾಮ್ಲಿಂಗ್ ಅಲ್ಲ, ಫ್ಯಾಶನ್. ಇವತ್ತು ಬೆಂಗಳೂರು ಕ್ಲಬ್, ಸೆಂಚೂರಿ ಕ್ಲಬ್ ಇಲ್ಲೆಲ್ಲಾ ಹಿರಿಯ ಅಧಿಕಾರಿಗಳು, ಶ್ರೀಮಂತರು, ಸಮಾಜವಾಧಿಗಳು, ಪರಿಸರವಾದಿಗಳು ಇವರೆಲ್ಲಾ ಹೋಗಿ ಜೂಜು ಗ್ಯಾಮ್ಲಿಂಗ್ ಆಡುತ್ತಾರೆ. ಅದು ಗ್ಯಾಮ್ಲಿಂಗ್ ಆಡುತ್ತಾರೆ. ಅದು ಗ್ಯಾಮ್ಲಿಂಗ್ ಅಲ್ಲ. ಈ ಸಾಮಾನ್ಯ ಜನರು ಮಾನ್ಯ ಸದಸ್ಯರು ಹೇಳಿದ ಹಾಗೆ ತಿಪಟೂರಿನಲ್ಲಿ ಕೂಲಿ ಮಾಡುವವರು ಜೂಜು, ಮಟ್ಕಾ ಆಡಿ ತಮ್ಮ ಕುಟುಂಬಕ್ಕೆ ಏನು ಇಲ್ಲದ ಹಾಗೆ ಮಾಡುತ್ತಾರೆ. ಇದು ಆಗಬಾರದು. ಅದರ ಬಗ್ಗೆ ನಾವು ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇವೆ. ಮತ್ತು ಎಲ್ಲೆಲ್ಲಿ ನಮ್ಮ ಗಮನಕ್ಕೆ ಇಂತಹ ಕೇಸ್‌ಗಳು ಬರುತ್ತವೆ ಅಲ್ಲಿ ತಕ್ಷಣ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಹೇಳಲಿಕ್ಕೆ ನಾನು ಇಷ್ಟ ಪಡುತ್ತೇನೆ.

ವಿವಿಧ ಕಾಮಗಾರಿಗಳಿಗೆ ಹಣ ಬಿಡುಗಡೆ

94 (593)ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1997-98ನೇ ಸಾಲಿನಲ್ಲಿ ಹುಬ್ಬಳ್ಳಿ ನಗರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕ್ರಿಯಾ ಯೋಜನೆಯಲ್ಲಿಯಾವ ಯಾವ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುವ ಅನುದಾನ ಎಷ್ಟು?

ಆ) ಮಂಜೂರಾತಿ ದೊರೆತ ಕಾಮಗಾರಿಗಳಿಗೆ ಇನ್ನೂ ಅನುದಾನ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ ನಗರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ 1997-98 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಮಂಜೂರಾತಿ ಮಾಡಲಾಗಿರುವ ಕಾಮಗಾರಿಗಳ ವಿವರ ಹಾಗೂ ಇವುಗಳಿಗೆ ಮಂಜೂರು ಮಾಡಲಾಗಿರುವ ಅನುದಾನ ವಿವರಗಳನ್ನು ಕೆಳಗೆ ನೀಡಲಾಗಿದೆ.

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿಯ ವಿವರ	ಅಂದಾಜು ಮೊತ್ತ
1.	ಯಲ್ಲಾಪುರ ಗ್ರಾಮದಲ್ಲಿ ಸಮಪಾತಳಿ ಬದು ನಿರ್ಮಾಣ	3.40
2.	ಯಲ್ಲಾಪುರ ಗ್ರಾಮದಲ್ಲಿ ತಡೆ ಅಣೆ ನಿರ್ಮಾಣ	0.60
3.	ಬಮ್ಮಾಪುರದಲ್ಲಿ ತಡೆ ಅಣೆ ನಿರ್ಮಾಣ	0.60
4.	ವೀರಾಪುರ ಗ್ರಾಮದಲ್ಲಿ ತಡೆ ಅಣೆ ನಿರ್ಮಾಣ	0.40
5.	ಗಬ್ಬೂರ ಮತ್ತು ಬಿದ್ನಾಟ ಗ್ರಾಮದಲ್ಲಿ ಚಿಕ್ಕು ಮತ್ತು ತೆಂಗಿನ ಗಿಡಗಳನ್ನು ನೆಡುವುದು	1.05
	ಮುಂದುವರೆದ ಕಾಮಗಾರಿ	
6.	ವೀರಾಪುರದಿಂದ ಸಾಕಾದವರೆಗೆ ಮಂಟೂರು ರಸ್ತೆ ಸುಧಾರಣೆ	0.59
7.	ಹಳೇ ಗಬ್ಬೂರಿನಿಂದ ಬುಡದ ರಸ್ತೆ ಸುಧಾರಣೆ	1.50
8.	ಬಿಡ್ನಾಳ ಪಶು ಚಿಕಿತ್ಸಾಲಯಕ್ಕೆ ಹೋಗುವ ಕೂಡು ರಸ್ತೆ ನಿರ್ಮಾಣ ಹಾಗೂ ರಿಪೇರಿ	1.50
9.	ಹಳೇ ಹುಬ್ಬಳ್ಳಿಯಿಂದ ಅಂಚಟಗೇರಿ (ವಯಾ) ಹಳ್ಳಿಹಾರ ತಿಮ್ಮಸಾಗರ ಕಿ.ಮೀ. 1 ರಲ್ಲಿ ಡಾಂಬರೀಕರಣ	2.00
		11.54

ಆ) ಕ್ರಮ ಸಂಖ್ಯೆ 7-9 ರಲ್ಲಿರುವ ಕಾಮಗಾರಿಗಳ ಅನುಷ್ಠಾನಕ್ಕಾಗಿ ಈಗಾಗಲೇ 3.00 ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗಿದ್ದು ಉಳಿದ ಅನುದಾನವನ್ನು ಅವಶ್ಯಕತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು.

ಶ್ರೀ ಅಶೋಕ ಕಾಟ್ವೆ:- ನಾವು ಬಯಲು ಸೀಮೆಯ ಶಾಸಕರೆಲ್ಲರೂ ಒಟ್ಟಾಗಿ ಈ ಪ್ರಶ್ನೆಯನ್ನು ಕೇಳಲು ಇಚ್ಛೆ ಪಡುತ್ತೇವೆ. ನಾವು ಎಷ್ಟು ಸಲ ಪ್ರಶ್ನೆಯನ್ನು ಕೇಳಿದರು ಸಹಿತ ಬಯಲು ಸೀಮೆಗಾಗಿ ಎಷ್ಟು ಹಣವನ್ನು ಇಟ್ಟಿದ್ದಾರೆ ಎಂದು ಒಂದು ಸಲವಾದರೂ ಉತ್ತರವನ್ನು ಕೊಟ್ಟಿಲ್ಲ. ಇವತ್ತು ಮಾನ್ಯ ಮಂತ್ರಿಗಳಾದ ಮಹೋದಯರು ಇದ್ದಾರೆ, ಅವರು ಈ ಸಲವಾದರೂ ಇದಕ್ಕೆ ಸೂಕ್ತ ಉತ್ತರವನ್ನು ನೀಡಬೇಕು. ಅದು ಹಸರಿಗೆ ಮಾತ್ರ ಬಯಲು ಸೀಮೆ ಅಭಿವೃದ್ಧಿ ಪಂಚಾಲಿಯಾಗಿದೆ, ಆದರೆ ಇದುವರೆವಿಗೂ ಅಭಿವೃದ್ಧಿ ಕಾರ್ಯಗಳಿಗಾಗಿ ಒಂದು ಪೈಸೆ ಕೂಡ ಬಿಡುಗಡೆಯಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಕಳೆದ ಅಧಿವೇಶನದಲ್ಲಿ ಬಯಲು ಸೀಮೆ ವ್ಯಾಪ್ತಿಯ ಶಾಸಕರೆಲ್ಲರೂ ಸದನದಲ್ಲಿ ಧರಣಿ ಕುಳಿತಾಗ, ಸರ್ಕಾರದವರು ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಭರವಸೆಯನ್ನು ನೀಡಿದರು. ಆದರೆ, ಇವತ್ತಿನವರೆವಿಗೂ ಆ ಹಣವನ್ನು ಬಿಡುಗಡೆ ಮಾಡಿಲ್ಲ. ಹಾಗೆ ಮಾಡುವುದಕ್ಕಿಂತ ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ತೆಗೆದುಹಾಕಿ ಬಿಡಿ.

(ಗೊಂದಲ)

ಶ್ರೀ ಎಸ್.ಪಿ. ಮುದ್ದ ಹನುಮೇಗೌಡ :- ಈ ಒಂದು ಮಂಡಲಿಗೆ ಸರ್ಕಾರ ಮಲತಾಯಿ ಧೋರಣೆಯನ್ನು ತೋರಿಸುತ್ತಿದೆ. ಬೇರೆ ಮಂಡಲಿಗಳಿಗೆಲ್ಲಾ ಸಾಕಷ್ಟು ಹಣ ಕೊಡುತ್ತಿದ್ದು, ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿಗೆ ಮಾತ್ರ ಯಾವುದೇ ಹಣವನ್ನು ಕೊಡುತ್ತಾ ಇಲ್ಲ. ಇದು ಬಹಳ ಅನ್ಯಾಯ.

ಡಾ: ಹೆಚ್.ಸಿ. ಬಾಲಕೃಷ್ಣ :- ನಮ್ಮ ಕ್ಷೇತ್ರದಲ್ಲೂ ಕೂಡ ಈ ಅಭಿವೃದ್ಧಿ ಮಂಡಲಿಗೆ ಹಣ ಬಿಡುಗಡೆಯಾಗಿಲ್ಲ. ಮೊನ್ನೆ 65 ಲಕ್ಷದ್ದು ಮತ್ತು 10 ಲಕ್ಷಗಳ ಎಸ್ಟಿಮೇಟನ್ನು ಕಳುಹಿಸಿದ್ದೇವೆ. ಹಿಂದಿನ 1995-96ರ ಹಣ ಕೂಡ ಇನ್ನೂ ಬಿಡುಗಡೆ ಆಗಿಲ್ಲ. ನಾವು ನಮ್ಮ ಕ್ಷೇತ್ರದ ಜನರಿಗೆ ರೋಡ್ ಮಾಡಿಸುತ್ತೇವೆ, ಬಿಲ್ಡಿಂಗ್ ಕಟ್ಟಿಸುತ್ತೇವೆ ಎಂದೆಲ್ಲಾ ಹೇಳಿ ಕೊಂಡು ಬರುತ್ತೇವೆ, ಆದರೆ ಅದರ ಸಾಧನೆಗೆ ಹಣ ಮಾತ್ರ ನಮ್ಮ ಕೈಗೆ ಬರುವುದಿಲ್ಲ.

(ಗೊಂದಲ)

ಶ್ರೀ ಕೆ. ವೆಂಕಟೇಶ್ :- ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಅಶೋಕ್ ಕಾಟ್ವೆ ಅವರು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರ ಬಂದಿರಲಿಲ್ಲ. ಆದುದರಿಂದ, ಅವರಿಗೆ ವಿವರವಾದಂಥ ಉತ್ತರವನ್ನು ಕೊಡುತ್ತೇನೆ. ಹಣದ ಪ್ರಶ್ನೆ ಕೇಳಿದ್ದಾರೆ, ಈ ಸಲದ ಬಜೆಟ್‌ನಲ್ಲಿ 14 ಕೋಟಿ ರೂಪಾಯಿ ಹಣವನ್ನು ಕೊಡುತ್ತಿದ್ದೇವೆ. ಕಳೆದ ಸಲ ಕೋಟಿ ಕೊಟ್ಟಿದ್ದೆವು ಈ ಸಲ ಅದರ ಎರಡಷ್ಟು ಕೊಡುತ್ತಿದ್ದೇವೆ.

(ಗೊಂದಲ)

ಒಬ್ಬ ಸದಸ್ಯರು :- ಮಾನ್ಯ ಸಚಿವರು ನಿಜವಾದ ಸ್ಥಿತಿಯನ್ನು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಸಚಿವರು ಈಗಾಗಲೇ ತಿಳಿಸಿದ್ದಾರೆ. ಕಳೆದ ಬಾರಿ ಬಯಲು ಸೀಮೆ ಅಭಿವೃದ್ಧಿ ಮಂಡಲಿಗಾಗಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲು ಪ್ರಸ್ತಾಪ ಮಾಡಿದ್ದು ತಮ್ಮ ಗಮನಕ್ಕೂ ಕೂಡ ಬಂದಿದೆ. ಸದಸ್ಯರೆಲ್ಲರೂ ಒತ್ತಾಯ ಸಹ ಮಾಡಿದ್ದಾರೆ.

(ಗೊಂದಲ)

ಡಾ: ಹೆಚ್.ಸಿ. ಬಾಲಕೃಷ್ಣ :- ಮೂರು ವರ್ಷಗಳಿಂದ ಯಾವ ರೀತಿಯ ಹಣವನ್ನು ಬಯಲು ಸೀಮೆ ಅಭಿವೃದ್ಧಿ ಮಂಡಳಿಗಾಗಿ ಕೊಟ್ಟಿಲ್ಲ, ಈ 7 ಕೋಟಿಯನ್ನು ಹೇಗೆ ಖರ್ಚು ಮಾಡಿದ್ದೀರಿ ಎಂದುಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್ :- ನೀವು ಸರಿಯಾದಂಥ ಉತ್ತರವನ್ನು ಕೇಳಿದ್ದರಿಂದ ಸಮರ್ಪಕವಾದ

ಉತ್ತರವನ್ನು ತರಿಸಿ ಕೊಡುತ್ತೇನೆಂದು ಹೇಳುತ್ತಾ, ಈ ವರ್ಷ 16 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಕೂಡ ಸಚಿವರು ಹೇಳಿದ್ದಾರೆ. ಅದಕ್ಕೆ ಅವರು ಸಮಂಯವನ್ನು ಕೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಪ್ರಶ್ನೆ ಸ್ಪಷ್ಟವಾಗಿ ಇದ್ದರು ಕೂಡ, ಸರ್ಕಾರ ಏತಕ್ಕೆ ಸಮಂಜಸವಾದ ಉತ್ತರವನ್ನು ಕೊಡುತ್ತಿಲ್ಲವೆಂದು ಗೊತ್ತಿಲ್ಲ. 1997-98ನೇ ಸಾಲಿನಲ್ಲಿ ಹುಬ್ಬಳ್ಳಿ ನಗರಕ್ಷೇತ್ರದ ಬಯಲು ಸೀಮೆ ಅಭಿವೃದ್ಧಿ ಮಂಡಲಿಯ ಕ್ರಿಯಾ ಯೋಜನೆಯ ವಿವಿಧ ಕಾಮಗಾರಿಗಳಿಗೆ ಬಿಡುಗಡೆಯಾಗಿ, ಮಂಜೂರು ಮಾಡಿದ ಹಣ ಎಷ್ಟು? ಇದರ ಬಗ್ಗೆ ಕೂಡ ಮಾಹಿತಿ ಇಲ್ಲ ಎಂದರೆ, ಅದಕ್ಕೆ ಒಂದು ಇಲಾಖೆ ಯಿದ್ದು, ಒಬ್ಬ ಮಂತ್ರಿ ಇದ್ದು, ಹೋದವರ್ಷ ಎಷ್ಟು ಹಣ ಈ ಮಂಡಲಿಗಾಗಿ ಖರ್ಚು ಮಾಡಿದ್ದೀರಿ ಎನ್ನುವ ಪ್ರಶ್ನೆಗೆ ಸಮಂಜಸವಾದ ಉತ್ತರ ಇಲ್ಲ ಎಂದರೆ ಪ್ರಶ್ನೋತ್ತರಕ್ಕೆ ಏನು ಅರ್ಥ?

ಶ್ರೀ ಕೆ. ವೆಂಕಟೇಶ್ :- ಅವರ ಉತ್ತರದಲ್ಲಿ ಕಾಮಗಾರಿಗಳ ವಿವರವನ್ನು ಕೊಟ್ಟಿರಲಿಲ್ಲ. ಅದಕ್ಕೆ ಅವರು ವಿವರವಾದ ಉತ್ತರವನ್ನು ಕಳುಹಿಸಿರಲಿಲ್ಲ. ಮಾನ್ಯ ಸದಸ್ಯರು ವಿವರವಾದ ಉತ್ತರವನ್ನು ಕೇಳಿದ್ದರಿಂದ ಅದಕ್ಕೆ ವಿವರವಾದ ಉತ್ತರವನ್ನು ತರಿಸಿ ಕೊಡುತ್ತೇನೆ.

ಶ್ರೀ ಬಿ. ಎಸ್ . ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ಏಕೆಂದರೆ 15 ದಿವಸಕ್ಕೆ ಮುಂಚಿತವಾಗಿ ಈ ಪ್ರಶ್ನೆಯನ್ನು ಕೇಳಲಾಗಿದ್ದು, ಸಿಗುವುದೇ ಅಪರೂಪಕ್ಕೆ ಒಂದು ಅವಕಾಶ. ಇದಕ್ಕೆ ಒಂದು ಇಲಾಖೆ ಇದ್ದು, ಒಬ್ಬ ಮಂತ್ರಿ ಇದ್ದು ಹೋದ ವರ್ಷ ಬಯಲು ಅವಕಾಶ. ಇದಕ್ಕೆ ಒಂದು ಇಲಾಖೆ ಇದ್ದು, ಒಬ್ಬ ಮಂತ್ರಿ ಇದ್ದು ಹೋದ ವರ್ಷ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ಕೇಳಿದಾಗ ಸಮರ್ಪಕವಾದ ಉತ್ತರವನ್ನು ಅಂಕಿಅಂಶಗಳನ್ನು ಕೊಡಲಿಲ್ಲ ಎಂದರೆ, ಆ ವ್ಯಾಪ್ತಿಯ ಶಾಸಕರು ಅಲ್ಲಿನ ಜನರಿಗೆ ಏನು ಉತ್ತರವನ್ನು ನೀಡಬೇಕು? ಅವರು ಅಲ್ಲಿ ಹೇಗೆ ಕೆಲಸ ಮಾಡಬೇಕು? ಇಷ್ಟು ಬೇಜವಾಬ್ದಾರಿಯಿಂದ ಉತ್ತರವನ್ನು ಕೊಟ್ಟಿದ್ದಾರೆ. ಮಾಡಲಿಲ್ಲ ಎಂದು ಹೇಳಿ, ನಮಗೆ ಆಸಕ್ತಿ ಇಲ್ಲ ಎಂದು ಹೇಳಿ, ಮಂಡಳಿಯನ್ನು ರದ್ದು ಮಾಡುತ್ತೇವೆ ಎಂದು ಹೇಳಿ.

ಶ್ರೀ ಜೆ.ಸಿ. ಮಾಧು ಸ್ವಾಮಿ :- ಕಳೆದ ಮಾರ್ಚ್ 31ರೊಳಗೆ ಹಣವನ್ನು ಬಿಡುಗಡೆ ಮಾಡಲು ಸಿದ್ಧರಾಮಯ್ಯನವರನ್ನು ಕಾಡಿ, ಬೇಡಿ ಒಪ್ಪಿಸಿದ್ದೆವು. ಆದರೆ, ಇದುವರೆವಿಗೂ ಒಂದು ರೂಪಾಯಿ ಹಣ ಬಿಡುಗಡೆ ಆಗಿಲ್ಲ.

(ಈ ಹಂತದಲ್ಲಿ ಬಯಲು ಸೀಮೆ ಕ್ಷೇತ್ರ ವ್ಯಾಪ್ತಿಯ ಶಾಸಕರೆಲ್ಲರೂ ಧರಣಿ ಕುಳಿತರು)

ಶ್ರೀ ಎಂ.ಪಿ. ಪ್ರಕಾಶ್ :- ಈಗ ಹಣ ಬಿಡುಗಡೆ ಆಗಿಲ್ಲ ಎನ್ನುತಕ್ಕಂಥದ್ದು ಸರಿಯಿಲ್ಲ. 10-15 ನಿಮಿಷ ಸಮಯವನ್ನು ಕೊಟ್ಟರೆ, ಹೋದವರ್ಷ ಎಷ್ಟು ಹಣ ಕೊಟ್ಟಿದ್ದಾರೆ, ಮತ್ತು ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂಬುದನ್ನು ತರಿಸಿಕೊಡುತ್ತೇವೆ ಈಗ ಸರಿಯಾದ ಬಂದಿಲ್ಲವಾದ್ದರಿಂದ, ಅದನ್ನು ಈಗ ತರಿಸಿಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ತಾವು ಕರೆದು ಕನ್‌ವಿನ್ಸ್ ಮಾಡಿ ಇಲ್ಲದಿದ್ದರೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನೇ ಮುಚ್ಚಿ ಬಿಡಿ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದು, ಹಣಕಾಸು ಸಚಿವರ ಜೊತೆ ಬಯಲುಸೀಮೆ ವ್ಯಾಪ್ತಿಗೆ ಬರುವ ಎಲ್ಲಾ ಮಾನ್ಯ ಶಾಸಕರುಗಳ ಒಂದು ಸಭೆ ಕರೆಯುವ ವ್ಯವಸ್ಥೆ ನಾವು ಮಾಡುತ್ತೇವೆ. ಈಗ ದಯಮಾಡಿ ತಮ್ಮ ತಮ್ಮ ಆಸನಗಳಿಗೆ ತೆರಳಿ. ಈಗ ಮೊದಲು ನಾವು ಹೇಳಿದನಂತರ ತಾವು ಯಾರಾದರೂ ನಾಲ್ಕು ಜನ ಪ್ರಶ್ನೆ ಎತ್ತಿ. ಈಗ ಸಮಸ್ಯೆ ಬಗೆಹರಿಯಬೇಕೇ? ಬೇಡವೇ? ಆ ಕುರಿತ ವಿವರಗಳನ್ನು ಈಗ ತರಿಸಿಕೊಳ್ಳುತ್ತಿದ್ದೇವೆ. ಹತ್ತು ನಿಮಿಷಗಳಲ್ಲಿ ವಿವರಗಳನ್ನು ಸದನಕ್ಕೆ ಒದಗಿಸಿ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಬಜೆಟ್‌ನಲ್ಲಿ ಮಂಜೂರಾದ ಹಣವನ್ನು ಏಕೆ ಬಿಡುಗಡೆ ಮಾಡಿಲ್ಲ?

ಶ್ರೀ ಎಂ.ಪಿ. ಪ್ರಕಾಶ್ :- ಆ ಸಮಸ್ಯೆಗೆ ಉತ್ತರ ಕೊಡುತ್ತೇನೆ. ಹತ್ತು ನಿಮಿಷಗಳ ಕಾಲ ತಾವು ದಯಮಾಡಿ ಕಾಯಬೇಕು. ಅಷ್ಟರೊಳಗೆ ವಿವರಗಳನ್ನು ತರಿಸಿಕೊಡುವುದಾಗಿ ಸದನಕ್ಕೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಅಕಸ್ಮಾತ್ ಹಣ ಬಿಡುಗಡೆಯಾಗಿಲ್ಲವೆಂದರೆ ಹಣಕಾಸು ಸಚಿವರ ಜೊತೆ ಮಾತನಾಡಿ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಈ ವಿಷಯ ಸದನದಲ್ಲಿ ಹಿಂದೆ ಚರ್ಚೆಯಾದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಉಪಸ್ಥಿತರಿದ್ದರು. ಆಗ ಪ್ರತಿ ಕ್ಷೇತ್ರಕ್ಕೂ ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದಾಗ ಕನಿಷ್ಠ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿ ಕೆಲಸ ಮಾಡುವುದಕ್ಕೆ ನಾವು ಪ್ರಯತ್ನಿಸುತ್ತೇವೆಂದು ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದರು.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಶಾಸಕರುಗಳ ಕಳಕಳಿ ಏನೆಂದು ಗೊತ್ತಾಗುತ್ತದೆ.

ಶ್ರೀ ಸಿ. ಬೈರೇಗೌಡ :- ಬಯಲುಸೀಮೆ ಅಭಿವೃದ್ಧಿ ಮಂಡಳಿ ವಿಶೇಷವಾಗಿ ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತಿರತಕ್ಕಂಥ ತಾಲ್ಲೂಕು, ಜಿಲ್ಲೆಗಳನ್ನು ಸೇರಿಸಿ ಮಾಡಿರತಕ್ಕ ಒಂದು ಮಂಡಳಿಯಾಗಿದೆ. ಮೊದಲನೇ ವರ್ಷ ಸದರಿ ಮಂಡಳಿಗೆ ಬಜೆಟ್‌ನಲ್ಲಿ ಸುಮಾರು ನಾಲ್ಕೂವರೆ ಕೋಟಿ ರೂಪಾಯಿಗಳಷ್ಟು ಪ್ರಾವಿಜನ್ ಇತ್ತು. ಅಷ್ಟೂ ಹಣ ಕೂಡ ಬಿಡುಗಡೆಯಾಗಿದೆ. ಕಳೆದ ವರ್ಷ ಸುಮಾರು ಏಳು ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಸೇರಿಸಲಾಗಿತ್ತು. ಬಯಲುಸೀಮೆ ವ್ಯಾಪ್ತಿಯಲ್ಲಿ ಬರುವ ಎರಡೂ ಸದನಗಳ ಮಾನ್ಯ ಸದಸ್ಯರುಗಳ ಸಭೆಯನ್ನು 2-3 ಬಾರಿ ಕರೆದಿದ್ದು, ಆ ಸಭೆಗೆ ಮಾನ್ಯ ಮುಖ್ಯ ಮಂತ್ರಿಗಳನ್ನೂ ಕೂಡ ಕರೆದು ಕೆಲವು ಸಂದರ್ಭಗಳಲ್ಲಿ ಹಣಕಾಸು ಸಚಿವರನ್ನು ನಾವು ಸಂಪರ್ಕಿಸಿ ಹೆಚ್ಚಿಗೆ ಹಣ ಕೊಡಬೇಕೆಂದು ನಾವುಗಳೆಲ್ಲರೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಹಣಕಾಸು ಸಚಿವರಲ್ಲಿ ವಿನಂತಿಸಿಕೊಂಡಿದ್ದೆವು, ಇದು ನಿಜ, ಮತ್ತು ಅದರ ಆಧಾರದ ಮೇಲೆ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿತ್ತು. ಈಗ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ಇಲ್ಲಿ ಸೀಮಿತವಾದ ಪ್ರಶ್ನೆಯಿದ್ದು, ಹುಬ್ಬಳ್ಳಿ ನಗರ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿರುವುದರಿಂದ ಅದಕ್ಕೆ

ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ, ರಾಜ್ಯ ವ್ಯಾಪಿ ಇರುವ ಅಥವಾ ಸದರಿ ಮಂಡಳಿಯ ವ್ಯಾಪ್ತಿಗೆ ಬರುವ ಕ್ಷೇತ್ರಗಳಿಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಅದರ ಕ್ಷೇತ್ರವಾರು ವಿವರ ಕೊಡಬೇಕೆಂದು ತಾವು ಕೇಳುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವೇ ಹೇಳಿರುವ ಪ್ರಕಾರ 1997-98 ರಲ್ಲಿ ಏಳು ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿದ್ದರೂ ಏಕೆ ಬಿಡುಗಡೆ ಮಾಡಿಲ್ಲ?

ಶ್ರೀ ಸಿ. ಬೈರೇಗೌಡ :- ಬಿಡುಗಡೆಯಾಗಿದೆ, ದಯವಿಟ್ಟು ಕೇಳಿ, ನನಗೆ ಆ ಮಂಡಳಿಯ ಕಾರ್ಯದರ್ಶಿಯವರು ಪತ್ರ ಬರೆದಿದ್ದಾರೆ. ಈಗ ಆ ಕುರಿತ ದಾಖಲೆ ನನ್ನ ಬಳಿ ಇಲ್ಲದಿರುವುದರಿಂದ ಎಷ್ಟು ಹಣ ಬಿಡುಗಡೆಯಾಗಿದೆ ಎಂಬ ಬಗ್ಗೆ ಕರಾರುವಕ್ಕಾಗಿ ಹೇಳಲು ಸಾಧ್ಯವಿಲ್ಲ. ಸ್ವಲ್ಪ ಹಣ ಬಿಡುಗಡೆಯಾಗಿದೆ, ಪೂರ್ತಿ ಹಣ ಬಿಡುಗಡೆಯಾಗಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ :- ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿರುವುದರಿಂದ ಅವರೇ ಉತ್ತರ ಹೇಳಲಿ.

ಶ್ರೀ ಸಿ. ಬೈರೇ ಗೌಡ :- ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ತಾವು ದಯವಿಟ್ಟು ಸ್ವಲ್ಪ ಕಾಲವಕಾಶ ಕೊಟ್ಟರೆ ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ? ಏನೇನು ಕೆಲಸಗಳನ್ನು ಕೈಗೆತ್ತಿಕೊಂಡಿದ್ದೇವೆ? ಮುಂತಾದ ವಿವರಗಳನ್ನು ಕೊಡುತ್ತೇವೆ. ಇದರಲ್ಲಿ ಮುಚ್ಚಿಡುವಂತಾದ್ದೇನೂ ಇಲ್ಲ, ಪ್ರಶ್ನೆ ಬಂದಾಗ ವಿವರ ಕೊಡಲೇಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇಲ್ಲದಿದ್ದರೆ, ಇಷ್ಟಾದರೂ ಭರವಸೆ ಕೊಡುತ್ತೀರಾ? ತಾವು 1997-98 ರಲ್ಲಿ ಸುಮಾರು ಏಳು ಕೋಟಿ ರೂಪಾಯಿಗಳಷ್ಟು ಹಣವನ್ನು ಇಟ್ಟಿದ್ದೀರೆಂದು ಇಟ್ಟು ಕೊಳ್ಳೋಣ . ಆ ಹಣವನ್ನು ಈ ತಿಂಗಳ 31ನೇ ತಾರೀಖಿನೊಳಗೆ ಬಿಡುಗಡೆ ಮಾಡಿ ಎಲ್ಲಾ ಕ್ಷೇತ್ರಗಳಿಗೂ ಹಂಚಿದ್ದೇವೆಂದು ಹೇಳಿದರೆ ನಾವು ಧರಣಿಯಿಂದ ತಪಸ್ಸು ಹೋಗುತ್ತೇವೆ, ಅಷ್ಟಾದರೂ ಮಾಡಿ, ಹೆಚ್ಚಿಗೆ ಒಂದು ಕೋಟಿ ರೂಪಾಯಿ ಕೊಡಬೇಡಿ, ಒದಗಿಸಿರುವ ದುಡ್ಡನ್ನು ಕೊಡುತ್ತೇವೆಂದಾದರೂ ಹೇಳಿ.

ಶ್ರೀ ಸಿ. ಬೈರೇಗೌಡ :- ನಮ್ಮ ಹತ್ತಿರ ಆ ಕುರಿತ ಮಾಹಿತಿ ಇಲ್ಲದೆ ನಾವೇನು ಹೇಳುವುದು? ಹಣವಂತೂ ಬಿಡುಗಡೆಯಾಗಿದೆ, ಸುಮಾರು ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಕೇಳುವುದು: ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಕೃಷಿ ಸಚಿವರಾದ ಶ್ರೀ ಬೈರೇಗೌಡರ ಮತ ಕ್ಷೇತ್ರಕ್ಕೆ ಆ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ? ಅದರ ಬಗ್ಗೆ ತಮಗೆ ಗೊತ್ತಿರಬಹುದು, ಅಲ್ಲದೆ, ಎಷ್ಟು ಹಣ ಖರ್ಚಾಗಿದೆ ಎಂಬುದೂ ತಮಗೆ ಗೊತ್ತಿರುತ್ತದಾದ್ದರಿಂದ ಇಷ್ಟು ಹೇಳಿದರೆ ಮುಂದಿನ ವಿಚಾರ ಏನೆಂದು ಗೊತ್ತಾಗುತ್ತದೆ. ಏಕೆಂದರೆ, ಈಗ ಆ ಕುರಿತ ಲೆಕ್ಕಪತ್ರಗಳನ್ನು ತರಬೇಕಾದರೆ ಸಮಯ ಬೇಕಾಗುತ್ತದಾದ್ದರಿಂದ, ಕನಿಷ್ಟ ತಮ್ಮ ಕ್ಷೇತ್ರಕ್ಕೆ ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಈ ವರ್ಷ ಎಷ್ಟು ಹಣ ಬಿಡುಗಡೆಯಾಗಿದೆಯೆಂಬುದನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ :- ನನ್ನ ಕ್ಷೇತ್ರ ಬೇರೆಯಲ್ಲ, ರಾಜ್ಯದ ಇತರ ಪ್ರದೇಶಗಳು ಬೇರೆಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಂತ್ರಿಗಳಾದ ತಮ್ಮ ಕ್ಷೇತ್ರಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ, ಅಷ್ಟಾದರೂ ಗೊತ್ತಾಗಬೇಕಲ್ಲ.

ಶ್ರೀ ಸಿ. ಬೈರೇಗೌಡ :- ನನ್ನ ಕ್ಷೇತ್ರಕ್ಕೆ ಮಾತ್ರ ನಾನು ಮಂತ್ರಿಯಾಗಿಲ್ಲ. ಈ ರಾಜ್ಯದಲ್ಲಿ ಏನೇನು ನಡೆಯುತ್ತದೆ ಎಂಬುದನ್ನೆಲ್ಲಾ ನಾವು ಗಮನಿಸಬೇಕಾಗುತ್ತದೆ. ಕೇವಲ ನನ್ನ ಕ್ಷೇತ್ರದ ವಿಚಾರ ಮಾತ್ರ ಗಮನಿಸದೆ ಎಲ್ಲವನ್ನೂ ಕೂಡ ಗಮನಿಸಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಎಷ್ಟು ಹಣ ಖರ್ಚಾಗಿದೆ ಎನ್ನುವುದು ನನಗೂ ಕರಾರುವಕ್ಕಾಗಿ ಗೊತ್ತಿಲ್ಲ. ಆ ಕುರಿತ ಅಂಕಿ-ಅಂಶ ತರಿಸಿ ನಾವು ಉತ್ತರ ನೀಡಬೇಕಾಗುತ್ತಂದೆ, ಉತ್ತರ ಕೊಡುತ್ತೇವೆ. ಇನ್ನೊಂದು ವಿಚಾರವೇನೆಂದರೆ, ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಹೆಚ್ಚು ಹಣ ಕೊಡಿಸಬೇಕೆಂದು ನಾನು ಬಹಳ ಪ್ರಯತ್ನ ಪಟ್ಟೆ. 2-3 ಸಾರಿ ಮಾನ್ಯ ಸದಸ್ಯರುಗಳನ್ನು ಕರೆದು ನಮ್ಮ ಮನೆಯಲ್ಲಿ ಔತಣಕೂಟ ಏರ್ಪಾಟು ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಅವರ ಹತ್ತಿರ ಉತ್ತರವಿಲ್ಲ. ಅವರೇ ಈ ಸದನದಲ್ಲಿ ದಿನಾಂಕ 10.3.98ರ ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 36ಕ್ಕೆ ಉತ್ತರ ಕೊಟ್ಟಿದ್ದಾರೆ. ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 1997-98ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂದು ಪ್ರಶ್ನಿಸಿರುವುದಕ್ಕೆ ಉತ್ತರವಾಗಿ ಮೂರು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಎರಡು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ. ನಿಮ್ಮಲ್ಲಿ ಅಂಕಿ-ಅಂಶ ಇಲ್ಲವೆಂದು ಮತ್ತೆ ಏಕೆ ಹೇಳುತ್ತಿದ್ದೀರಿ? ಸದನಕ್ಕೆ ಏನು ಮಾಹಿತಿ ಒದಗಿಸಿಕೊಡುತ್ತಾರೆ, ಅದನ್ನೂ ಓದುವುದಕ್ಕೆ ತಯಾರಿಲ್ಲವೆಂದು ಏನರ್ಥ? ನೀವು 10ನೇ ತಾರೀಖು ಸದನದಲ್ಲಿ ಈ ಉತ್ತರ ಕೊಟ್ಟಿದ್ದೀರಿ. ಅಂದರೆ ಬಿಡುಗಡೆ ಮಾಡಿದ ಅಷ್ಟು ಹಣದಲ್ಲಿ ಎಷ್ಟು ಖರ್ಚು ಮಾಡಿದ್ದೀರಿ? ಇದನ್ನಾದರೂ ಹೇಳಬಹುದಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಬಯಲುಸೀಮೆಯ ಶಾಸಕರುಗಳು ನಮ್ಮ ಕ್ಷೇತ್ರಕ್ಕೆ ಹಣವನ್ನು ಒದಗಿಸಿಲ್ಲವೆಂದು ಧರಣಿ ಮಾಡುತ್ತಿದ್ದಾರೆ. ಎರಡೂ ಕಡೆಯಿಂದ ಚರ್ಚೆ ನಡೆಯುತ್ತಿದೆ. ತಾವೂ ಸಹ ಬಯಲುಸೀಮೆಗೆ ಸೇರಿಸಿದ್ದೀರಿ. ಎಲ್ಲಕ್ಕಿಂತ ತಾವು ಈ ಸದನದ ಅಧ್ಯಕ್ಷರಾಗಿದ್ದೀರಿ, ಹೀಗಿದ್ದರೂ ತಾವು ಇದರ ಬಗ್ಗೆ ಮೌನವಹಿಸಿರುವುದು ನನಗೆ ಅರ್ಥವಾಗುತ್ತಿಲ್ಲ. ತಾವು ಆ ಮೌನದಿಂದ ಹೊರಕ್ಕೆ ಬಂದು ಸಮಸ್ಯೆಯನ್ನು ಬಗೆಹರಿಸಬೇಕು. ತಮ್ಮ ಸಹಕಾರ ಅತ್ಯಗತ್ಯವಾಗಿದೆ. ತಾವು ಈ ರೀತಿ ಮೌನವಹಿಸಿ ಕುಳಿತುಕೊಂಡರೆ ಕಷ್ಟವಾಗುತ್ತದೆ.

ತಾವು ಇದಕ್ಕೆ ಸ್ಪಂದಿಸಬೇಕು ಮತ್ತು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಸದಸ್ಯರುಗಳೇನೇನು ಕೇಳುತ್ತಿದ್ದಾರೆ ಅವೆಲ್ಲವನ್ನು ವಿವರವಾಗಿ ಒದಗಿಸಲು ಸಿದ್ದರಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಇವರುಗಳು ಹತ್ತಾರು ಟೆಲಿಗ್ರಾಂಗಳನ್ನು ಚಿತ್ರದುರ್ಗದ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಕಳಿಸಿದ್ದಾರೆ. ಆ ಕಛೇರಿಯಿಂದ ಒಂದು

ಉತ್ತರವನ್ನು ಕಳಿಸುವುದಿಲ್ಲ. ಅವರು ಟೆಲಿಗ್ರಾಂ ಕಳಿಸಿರುವ ಪ್ರತಿಯನ್ನು ನನಗೆ ಕೊಟ್ಟಿದ್ದಾರೆ. ಸರ್ಕಾರದಿಂದ ಮೂರುವರೆ ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದರೆ ಅದನ್ನು ಯಾರ ಮನೆಯಲ್ಲಿ ಇಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಆ ಕಛೇರಿ ಇದೆಯೋ ಇಲ್ಲವೋ ಗೊತ್ತಿಲ್ಲ. ಧಾರವಾಡ ಹುಬ್ಬಳ್ಳಿ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಕೇವಲ ಮೂರು ಲಕ್ಷ ಕೊಟ್ಟಿದ್ದಾರೆ. ಈ ರೀತಿಯಾದರೆ ಈ ಇಲಾಖೆ ಏಕೆ ಬೇಕು? ವೈಂಡ್ ಅಪ್ ಮಾಡಿಬಿಡಿ. ಚಿತ್ರದುರ್ಗದಲ್ಲೇಕೆ ಈ ಕಛೇರಿಯನ್ನಿಟ್ಟುಕೊಂಡಿದ್ದೀರಿ? ಕೇವಲ ಸಂಬಳ ಸಾರಿಗೆ ಕೊಟ್ಟು ಕೊಂಡಿದ್ದೀರಿ ಯಾವುದೇ ಅಭಿವೃದ್ಧಿ ಕೆಲಸವನ್ನು ಮಾಡಿಲ್ಲ. ಕಳೆದ ಮೂರು ವರ್ಷದಲ್ಲಿ ಇಲಾಖೆಗೆ ಏನು ಖರ್ಚು ಮಾಡಿದ್ದೀರಿ ಅಷ್ಟು ಅಭಿವೃದ್ಧಿ ಕೆಲಸ ಆದರಿಂದಾಗಿಲ್ಲ. ಹೀಗಿರುವಾಗ ನೀವು ಹೇಳಿದ ಕತೆಯನ್ನು ಕೇಳಿಕೊಂಡು ಕಣ್ಣುಮುಚ್ಚಿ ಕೊಂಡು ಕುಳಿತುಕೊಳ್ಳಬೇಕು? ಇದರ ಬಗ್ಗೆ ಅಂಕಿ ಅಂಶವನ್ನು ಕೇಳಿದರೆ ಅದು ಕೊಡದಿದ್ದ ಮೇಲೆ ಅದಕ್ಕಾಗಿ ಮಂತ್ರಿಯೊಬ್ಬರನ್ನೇಕೆ ಇಟ್ಟುಕೊಂಡಿದ್ದೀರಿ? ಇದು ಅಪಮಾನವಲ್ಲವೆ? ಏಳು ಕೋಟಿ ಹಣವನ್ನು ತೆಗೆದಿಟ್ಟು ಏಕೆ ಖರ್ಚು ಮಾಡುವುದಿಲ್ಲ?

ಶ್ರೀ ಸಿ. ಬೈರೇಗೌಡ :- ಇಲ್ಲಿ ಪ್ರಶ್ನೆ ಇರತಕ್ಕದ್ದು ಹುಬ್ಬಳ್ಳಿ ನಗರಕ್ಕೆ ಸೀಮಿತವಾಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಹುಬ್ಬಳ್ಳಿ ನಗರದ ಬಗ್ಗೆಯೂ ಸಹ ಉತ್ತರವಿಲ್ಲ.. ಬೇಕಾದರೆ ತಮ್ಮ ಮಂತ್ರಿಗಳನ್ನು ಕೇಳಿ. ಅವರು ಉತ್ತರವನ್ನು ಕೊಟ್ಟರೆಯೇ ಕೇಳಿ? ಹುಬ್ಬಳ್ಳಿ ಮತ್ತು ಆ ಏರಿಯಾದ ಯಾವುದೇ ಶಾಸಕರ ಕ್ಷೇತ್ರದ ಬಗ್ಗೆಯು ಸಹ ಉತ್ತರವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಇವರ ಬಜೆಟ್‌ನಲ್ಲಿ ಏರಿಯಾ ಡೆವಲಪ್‌ಮೆಂಟ್‌ಪ್ರೋಗ್ರಾಂಗೆ 102 ಕೋಟಿ ರೂಪಾಯಿಗಳು ಇತ್ತು. ಅದರಲ್ಲಿ ಬಯಲುಸೀಮೆ ಅಭಿವೃದ್ಧಿಗೆ 12. 50 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದರು. ರಿಲೀಸ್ ಮಾಡಿದ್ದು 6 ಕೋಟಿ 50 ಲಕ್ಷ ರೂಪಾಯಿಗಳೆಂದು ಹೇಳಿದ್ದಾರೆ. ಮೊನ್ನೆ ಹತ್ತನೇ ತಾರೀಖು ಇದರ ಬಗ್ಗೆ ಉತ್ತರವನ್ನು ಕೊಡುತ್ತಾ 3 ಕೋಟಿ 70 ಲಕ್ಷ ರೂಪಾಯಿಗಳನ್ನು ಮಾತ್ರ ನಾವು ಎರಡು ಕಂತಿನಲ್ಲಿ ರಿಲೀಸ್ ಮಾಡಿದ್ದೇವೆಂದು ಹೇಳಿದರು. ಅದರಲ್ಲಿ ಕೇವಲ ಒಂದು ಕೋಟಿ ಮಾತ್ರ ಖರ್ಚಾಗಿದೆಯೆಂದು ತಿಳಿದುಬಂದಿದೆ. ಇವರಿಗೆ ಏರಿಯಾ ಡೆವಲಪ್ ಮೆಂಟ್ ಪ್ರೋಗ್ರಾಂನಲ್ಲಿ ಎಷ್ಟು ಆಸಕ್ತಿ ಇದೆಯೆಂದರೆ, ಹೆಚ್.ಕೆ.ಡಿ.ಬಿ.ಗೆ 60 ಕೋಟಿ ನಿಗದಿ ಕೋಟಿ ಮಾಡಿ 26 ಕೋಟಿ ಬಿಡುಗಡೆ ಮಾಡಿರುವುದಾಗಿ ಹೇಳಿದ್ದಾರೆ, ಮಲೆನಾಡು ಅಭಿವೃದ್ಧಿ ಮಂಡಳಿಗೆ 30 ಕೋಟಿ ನಿಗದಿ ಮಾಡಿ 10 ಕೋಟಿ ಬಿಡುಗೆ ಮಾಡಿರುವುದಾಗಿ ಹೇಳಿದ್ದಾರೆ, ಬಯಲುಸೀಮೆ ಅಭಿವೃದ್ಧಿಗೆ 12 ಕೋಟಿ 50 ಲಕ್ಷವೆಂದು ನಿಗದಿ ಮಾಡಿ 6 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಆ್ಯಕ್ಚುವಲಿ ಅದನ್ನು ಕಡಿಮೆ ಮಾಡಿ 7 ಕೋಟಿ 40 ಲಕ್ಷಕ್ಕೆ ನಿಗದಿ ಮಾಡಿ ಬಿಡುಗಡೆ ಮಾಡಿದ್ದು 3 ಕೋಟಿ 70 ಲಕ್ಷ ರೂಪಾಯಿ ಮಾತ್ರ. ಈ ರೀತಿ ಮೋಸವನ್ನೇಕೆ ಮಾಡುತ್ತೀರಿ? ಬಜೆಟ್‌ನಲ್ಲಿ ನಿಗದಿ ಮಾಡುವುದೇ ಒಂದು, ಬಿಡುಗಡೆ ಮಾಡುವುದು ಇನ್ನೊಂದು, ನಿಜವಾಗಿ ಬಿಡುಗಡೆ ಮಾಡುವುದು ಮತ್ತೊಂದು. ಖರ್ಚು ಮಾಡುವುದು ಹತ್ತು ಪರ್‌ಸೆಂಟ್ ಸಹ ಇರುವುದಿಲ್ಲ. ನಾವು ಇದರ ಬಗ್ಗೆ ಅವರಿಗೆ ಯಾವ ಭಾಷೆಯಲ್ಲಿ ಹೇಳಬೇಕೋ ಅದನ್ನು ಅಧ್ಯಕ್ಷರಾದ ತಾವೇ ಹೇಳಬೇಕು. ಏಕೆಂದರೆ, ನಾವು ಇಲ್ಲಿ ಪದೇ ಪದೇ ಮಾತನಾಡುವಾಗ ತಾವು ಬೇಜಾರು ಮಾಡಿಕೊಳ್ಳುತ್ತೀರಿ. ಆದ್ದರಿಂದ ತಾವು ಯಾವ ಭಾಷೆಯಲ್ಲಿ ಇವರಿಗೆ ಬೈಯ್ಯಬೇಕೆಂದು ಹೇಳುತ್ತೀರೋ ಅದೇ ಭಾಷೆಯಲ್ಲಿ ಬೈಯ್ಯೋಣ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೆ, ಬಜೆಟ್ ಒಂದು ಅಂದಾಜು ಮಾತ್ರ. ಅವರೂ ಸಚಿವರಾಗಿ ಕೆಲಸಮಾಡಿದ್ದಾರೆ, ಸರ್ಕಾರವನ್ನು ನಡೆಸಿ ಅನುಭವವನ್ನು ಹೊಂದಿದ್ದಾರೆ. ಬಜೆಟ್ ಎನ್ನತಕ್ಕದ್ದು ಇಷ್ಟು ಹಣ ಬರುತ್ತದೆ, ಸರ್ಕಾರ ಇಷ್ಟು ಖರ್ಚು ಮಾಡುತ್ತದೆ ಎಂಬ ಬಗ್ಗೆ ಒಂದು ಅಂದಾಜು ಮಾತ್ರ. ಬಜೆಟ್‌ನಲ್ಲಿ ಇಷ್ಟು ಹಣವನ್ನು ನಿಗದಿ ಮಾಡಿ ಅನಂತರ ಕಡಿಮೆ ಹಣವನ್ನು ಖರ್ಚು ಮಾಡುವುದಕ್ಕೆ ನಾನಾ ಕಾರಣಗಳಿರುತ್ತದೆ. ಕಡಿಮೆ ಹಣ ಬಿಡುಗಡೆಯಾಗಿರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಪ್ರಸ್ತುತ ವರ್ಷದಲ್ಲಿ ಇಡೀ ಪ್ಲಾನ್‌ನಲ್ಲಿಯೇ ಕಡಿತವಾಗಿರುವುದು ತಮಗೂ, ಮಾನ್ಯ ಸದಸ್ಯರುಗಳೆಲ್ಲರಿಗೂ, ಇಡೀ ರಾಜ್ಯಕ್ಕೇ ಗೊತ್ತಿದೆ. ಅದೇ ರೀತಿ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ನಿಗದಿಯಾಗಿದ್ದ ಹಣದಲ್ಲಿ ಕಡಿತ ಉಂಟಾಗಿರಬಹುದು. ಅದರ ಬಗ್ಗೆ ಕರಾರುವಕ್ಕಾದ ಅಂಕಿಅಂಶಗಳು ನನ್ನ ಹತ್ತಿರ ಇಲ್ಲದಿರುವುದರಿಂದ ನಾನು ಅದರ ಬಗ್ಗೆ ಹೇಳುತ್ತಿಲ್ಲ.

ಶ್ರೀ ಕೆ. ವೆಂಕಟೇಶ್ :- ಮಾನ್ಯ ಅಧ್ಯಕ್ಷರೆ, ಎಷ್ಟೆಷ್ಟು ಹಣ ಬಿಡುಗಡೆ ಯಾಗಿದೆ, ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ಕೊಡಲು ದಯಮಾಡಿ ಸ್ವಲ್ಪ ಸಮಯ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಮಂತ್ರಿಗಳೆ ತಮ್ಮ ಅಧಿಕಾರಿಗಳು ಎಲ್ಲಿ ಹೋಗಿದ್ದಾರೆ, ತಾವು ಈ ರೀತಿ ಉತ್ತರೆ ಕೊಟ್ಟರೆ, ತಮ್ಮ ಅಧಿಕಾರಿಗಳು ಇಷ್ಟು ಹಣ ಬಿಡುಗಡೆ ಯಾಗಿದೆ, ಇಷ್ಟು ಖರ್ಚಾಗಿದೆ ಎಂಬ ಬಗ್ಗೆ ಚೀಟಿ ಬರೆದುಕೊಡಲು ಆಗುವುದಿಲ್ಲವೆ? ಅವರುಗಳಿಗೇಕೆ ಸಂಬಳಕೊಟ್ಟು ಇಟ್ಟು ಕೊಂಡಿದ್ದೀರಿ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ತಾವು 12. 50 ಕೋಟಿ ಇದ್ದದನ್ನು 7 ಕೋಟಿ 40 ಲಕ್ಷ ಕಡಿಮೆ ಮಾಡಿ ಅದನ್ನು ಸಹ ಬಿಡುಗಡೆ ಮಾಡಿಲ್ಲವಲ್ಲ ಎಂದು ನಮ್ಮ ಪ್ರಶ್ನೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಬಯಲುಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ಅಧಿಕಾರಿಗಳ್ಯಾರು ಇಲ್ಲ. ಒಂದು ಮಾಹಿತಿ ಇಲ್ಲ. ಹೀಗಾದರೆ ಅಭಿವೃದ್ಧಿಯಾಗುವುದು ಹೇಗೇ?

ಶ್ರೀ ಬಿ.ಎಸ್. ಯಡಿಯೂರಪ್ಪ :- ಈ ಸರ್ಕಾರವಿದೆಯೇ? ಆಸಕ್ತಿ ಇಲ್ಲದಿದ್ದರೆ ರಾಜೀನಾಮೆ ಕೊಟ್ಟಾದರು ಹೋಗಿ ಇವರಿಗೆ ಸೀರಿಯಸ್‌ನೆಸ್ ಇಲ್ಲ. ಹಿರಿಯ ಸಚಿವರ್ಯಾರಾದರು ಸಹ ಉತ್ತರವನ್ನು ಕೊಡಬೇಕಲ್ಲವೇ? ಹೀಗಾದರೆ ಹೇಗೆ?

ಶ್ರೀ ಸಿ. ಬೈರೇಗೌಡ :- ತಾವು ಈ ರೀತಿ ಮಾತನಾಡಬಾರದು. ಇದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಇದನ್ನು ಯಾವ ರೀತಿಮಾಡನಾಡಲಿ? ನಾನು ಏನು ಉತ್ತರವನ್ನು ಕೊಡಲಿ? ತಮ್ಮ ಹತ್ತಿರ ಅಂಕಿಅಂಶವಿಲ್ಲ ಪ್ರಶ್ನೋತ್ತರ ಸಮಯದಲ್ಲಿ ನಾವಿಷ್ಟು ಸದಸ್ಯರುಗಳು ಬಾವಿಗೆ ಬಂದರೆ ನಮ್ಮ ಪ್ರಶ್ನೆಗೆ ಅಂಕಿಅಂಶವನ್ನು ಕೊಡಲು ತಮ್ಮ ಅಧಿಕಾರಿಗಳಹತ್ತಿರ ಮಾಹಿತಿ ಇಲ್ಲವಲ್ಲ? ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಜೇಳಿ? ಅಧಿಕಾರಿಗಳಿಂದ ಅದರ ಬಗ್ಗೆ ಮಾಹಿತಿ ತರಿಸಿಕೊಳ್ಳಿ? ತಾವು ತಮಗೆ ಖುಷಿ ಬಂದಂತೆ ಸರ್ಕಾರ ನಡೆಸುವುದಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಈ ರೀತಿಯಾದರೆ ಕೆಲಸ ಮಾಡಲು ಆಗುವುದಿಲ್ಲ. ತಾವು ಹೇಳಿದಂತೆ ಸರ್ಕಾರ ನಡೆಯಬೇಕೆಂದು ಅದು ಆಗುವುದಿಲ್ಲ. ಬಜೆಟ್ ಕೇವಲ ಒಂದು ಅಂದಾಜು ಮಾತ್ರ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಹಾಗಿದ್ದರೆ ಬಜೆಟನ್ನೇಕೆ ಇಡುತ್ತೀರಿ?

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಬಜೆಟ್‌ನಲ್ಲಿ ಇಟ್ಟಿರುವ ಹಣವನ್ನು ಯಾವ ಸರ್ಕಾರದಲ್ಲಿ, ಯಾವ ಕಾಲದಲ್ಲಿ ಪೂರ್ಣವಾಗಿ ಬಿಡುಗಡೆ ಮಾಡಿದ್ದಾರೆ ದಾಖಲೆಗಳಿದ್ದರೆ ಹೇಳಿ? ಬಜೆಟ್‌ನಲ್ಲಿರುವ ಹಣವನ್ನು ಸಂಪೂರ್ಣವಾಗಿ ಯಾವ ಕಾಲದಲ್ಲಿ ರಿಲೀಸ್ ಮಾಡಿದ್ದಾರೆ? ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಖಿರ್ಗೆಯವರು, ಮಾನ್ಯ ಎಂ. ವೈ.ಘೋರ್ಪಡೆಯವರು ನಾವೆಲ್ಲರೂ ಕಲೆತು, ಹೈದ್ರಾಬಾದ್ ಅಭಿವೃದ್ಧಿ ಮಂಡಳಿಯಲ್ಲಿ ನಮೂದು ಮಾಡಿದ್ದ 60 ಕೋಟಿ ರೂಪಾಯಿಗಳಲ್ಲಿ ಕೇವಲ 27 ಕೋಟಿ ಬಿಡುಗಡೆಯಾಗಿದೆ. ಉಳಿದಿರತಕ್ಕ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಹೋದಮೇಲೆ ಹತ್ತು ಕೋಟಿ ಹಣವನ್ನು ಬಿಡುಗಡೆ ಮಾಡಿ ಉಳಿದಿದ್ದಕ್ಕೆ ಇವಾಲ್ವೆ ಮಾಡುವುದಾಗಿ ಹೇಳಿದ್ದರು. ತಾವು ಎಂದು ಬಯಲುಸೀಮೆ ಅಭಿವೃದ್ಧಿಗೆ ಆಯವ್ಯಯದಲ್ಲಿ ನಿಗಧಿ ಮಾಡಿರುವ ಹಣವನ್ನು ಬಿಡುಗಡೆ ಮಾಡಿ ಮೂರತ್ತನೆ ತಾರೀನೊಳಗೆ ಉಪಯೋಗ ಮಾಡಿಕೊಳ್ಳಿ ಎಂದು ಕೇಳುತ್ತಿದ್ದೀರಿ. ಇಲ್ಲಿಯವರೆಗೆ ಇದರಲ್ಲಿ ಬಿಡುಗಡೆಯಾಗಿರುವ ಹಣವೆಷ್ಟು, ಖರ್ಚಾಗಿರುವುದೆಷ್ಟು ಎಂಬ ಬಗ್ಗೆ ಮಾಹಿತಿಯನ್ನು ಪಡೆಯಲು ಅಧಿಕಾರಿಗಳು ಹೋಗಿದ್ದಾರೆ. 10- 15 ನಿಮಿಷಗಳ ಅದರ ಬಗ್ಗೆ ವಿವರಣೆ ಕೊಡುತ್ತೇನೆ. ಆಲ್ಲಿಯವರೆಗೆ ತಾವು ತಾಳ್ಮೆಯಿಂದಿದ್ದು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ಅನಂತರ, ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳ ಜೊತೆಗೆ ತಮ್ಮೆಲ್ಲರನ್ನು ಕರೆದುಕೊಂಡು ಹೋಗಿ ಏನನ್ನು ಮಾಡಲು ಸಾಧ್ಯವಾಗುತ್ತದೆ, ಎಷ್ಟು ಹಣವನ್ನು ಬಿಡುಗಡೆ ಮಾಡಲು ಸಾಧ್ಯವಾಗುತ್ತದೆ ಎಂಬ ಬಗ್ಗೆ ಸಹ ನಿಲುವನ್ನು ತೆಗೆದುಕೊಳ್ಳುತ್ತೇವೆ. ತಾವು ದಯಮಾಡಿ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ತಾವುಗಳು ಬಾವಿಯಲ್ಲಿಕುಳಿತುಕೊಳ್ಳುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಆ ವಿಚಾರದಲ್ಲಿ ಈವತ್ತೇ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮುಖ್ಯಮಂತ್ರಿಯವರವರೆಗೆ ಹೋಗುವ ಅಗತ್ಯವಿಲ್ಲ. ತಾವು ಬಜೆಟ್‌ನಲ್ಲಿ ಇದಕ್ಕಾಗಿ 12.50 ಕೋಟಿ ಇಟ್ಟಿದ್ದೀರಿ. ಅನಂತರ ಬಜೆಟ್‌ನಲ್ಲಿರುವುದನ್ನು ಕಡಿಮೆ ಮಾಡಿ ಅದನ್ನು 7 ಕೋಟಿ 40 ಲಕ್ಷಕ್ಕೆ ಇಳಿಸಿದಿರಿ. ಅಂದರೆ 5 ಕೋಟಿ ಕಡಿಮೆ ಮಾಡಿದಿರಿ. ಆ 7 ಕೋಟಿ 40 ಲಕ್ಷಕ್ಕೆ 3 ಕೋಟಿ 70 ಲಕ್ಷವನ್ನು ಎರಡು ಕಂತಿನಲ್ಲಿ ಬಿಡುಗಡೆ ಮಾಡುತ್ತಿರುವುದಾಗಿ ಹೇಳಿದ್ದಿರಿ. ತಾವು ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರ ಚುಕ್ಕೆರಹಿತ ಪ್ರಶ್ನೆಗೆ

ಉತ್ತರವನ್ನು ಕೊಡುತ್ತಾ 3 ಕೋಟಿ 70 ಲಕ್ಷ ಬಿಡುಗಡೆ ಮಾಡಿದ್ದೇವೆ; ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ಗೊತ್ತಿಲ್ಲವೆಂದು ಹೇಳಿದ್ದೀರಿ. ಮೊನ್ನೆ ಇನ್ನೊಂದು ಚುಕ್ಕೆ ರಹಿತ ಪ್ರಶ್ನೆಗೆ ಉತ್ತರವನ್ನು ಕೊಡುತ್ತ 1 ಕೋಟಿ ರೂಪಾಯಿ ಖರ್ಚಾಗಿದೆ ಎಂದು ಹೇಳಿದಿರಿ. ನಾವು ಮಾರ್ಚ್ ತಿಂಗಳ ಕೊನೆಯಲ್ಲಿದ್ದೇವೆ, ಬಜೆಟ್‌ನಲ್ಲಿ ನಮೂದಿಸಿದ್ದ 12.50 ಕೋಟಿ ಹಣವನ್ನಂತು ಬಿಡುಗಡೆ ಮಾಡುವುದಕ್ಕಾಗಲಿಲ್ಲ, ಆದರೆ 7.40 ಕೋಟಿ ತಮ್ಮ ಕಮಿಟ್‌ಮೆಂಟ್ ಏನಿತ್ತು ಅದನ್ನಾದರೂ ಬಿಡುಗಡೆ ಮಾಡಲು ಮುಖ್ಯ ಮಂತ್ರಿಗಳ ಹತ್ತಿರವೇಕೆ ಹೋಗಬೇಕು. ಪ್ಲಾನ್ ಔಟ್ ಲೇ ಯನ್ನು 12.50 ಕೋಟಿಯಿಂದ 7.40 ಕೋಟಿ ಕಡಿಮೆ ಮಾಡಿದ್ದೀರಿ. ಆ ಹಣವನ್ನಾದರೂ ಸಹ ಬಿಡುಗಡೆ ಮಾಡಲು ಸಿದ್ಧರಿಲ್ಲವೆಂದರೆ, ಅದಕ್ಕೂ ಸಹ ಮುಖ್ಯಮಂತ್ರಿಗಳ ಹತ್ತಿರ ಅನುಮತಿಗೆ ಹೋಗಬೇಕು.

12.50 ಪಿ.ಎಂ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳ ಹತ್ತಿರ ಏಕೆ ಮಾತನಾಡುತ್ತೀರಿ ಎಂದರೆ ಅದು ಒಂದು ಮಹತ್ವದ ಸ್ಥಾನ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಏಕೆ ಹೋಗಬೇಕು, ನೀವು ಏನು ದಾನವನ್ನು ಕೊಡುತ್ತೀರಿ.

ಶ್ರೀ ಎಂ.ಪಿ. ಪ್ರಕಾಶ್ :- ಇಲ್ಲಿ ಯಾರಿಗೆ ಯಾರು ದಾನ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದು ಈ ಸದನದಲ್ಲಿ ಆಪ್ರೂವಲ್ ಮಾಡಿದ್ದು, ಏಕೆ ಮುಖ್ಯಮಂತ್ರಿಗಳ ಹತ್ತಿರ ಹೋಗುವುದು ಎಂದು ನಾನು ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾರಿಗೂ ಯಾವ ದಾನವನ್ನು ಕೊಡುವುದಿಲ್ಲ. ಇಲ್ಲಿ ಇರುವ ಪ್ರಶ್ನೆ ಏನು ಎಂದರೆ, ಇಲ್ಲಿ ಕೊಡಬೇಕಾಗಿರುವ ಹಣದ ಬಗ್ಗೆ ಮುಖ್ಯಮಂತ್ರಿಗಳ ಗುಡ್‌ವಿಲ್‌ನ್ನು ಉಪಯೋಗಿಸಿಕೊಂಡು ಇಲ್ಲಿ ಏನು ಇದೆ ಎನ್ನುವುದನ್ನು ಪರಿಶೀಲನೆ ಮಾಡಿ ಬಗೆಹರಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ. ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡುತ್ತೇವೆ ಎಂದರೆ ನೀವು ಅದನ್ನು ಅಪಮಾನದ ಸಂಗತಿ ಎಂದು ಏಕೆ ತಿಳಿದುಕೊಳ್ಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಏಕೆ ಹೋಗಬೇಕು ಎಂದು ನಾನು ಕೇಳುತ್ತೇನೆ. ಈ ಸದನ ನಡಿದಿದೆ. Is it not his duty to come and reply.

ಶ್ರೀ ಎಂ. ಪಿ. ಪ್ರಕಾಶ್ :- ನಿಮ್ಮ ಪ್ರತಿಪಕ್ಷಗಳ ಸ್ಥಾನಕ್ಕೆ ಹೇಗೆ ಮಹತ್ವ ಇದೆ, ಅದೇ ತರಹ ಮುಖ್ಯಮಂತ್ರಿಗಳ ಸ್ಥಾನಕ್ಕೆ ಒಂದು ಮಹತ್ವ ಇದೆ. ಅದಕ್ಕಾಗಿ ಈಗ ಬಂದಿರುವ ಸಮಸ್ಯೆಗಳನ್ನು ಚರ್ಚೆ ಮಾಡಿ ಬಗೆಹರಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ :- ನೀವು ಹೊರಗಡೆ ಹೋಗಿ ಪಂಚಾಯಿತಿ ಮಾಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್ :- ನೀವು ಸರ್ಕಾರವನ್ನು ನಡೆಸಿದವರು, ನೀವು ಎಂಥ ಪಂಚಾಯಿತಿ ನಡೆಸಿದ್ದೀರಿ ಎಂದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಿಮ್ಮ ಹಾಗೆ ಸರ್ಕಾರವನ್ನು ನಾವು ನಡೆಸುತ್ತಿರಲಿಲ್ಲ. ನಾವು ಕೊಟ್ಟಿರುವ ವರದಿಯನ್ನು ತೆಗೆದು ನೋಡಿ ಯಾವ ಯಾವ ಏರಿಯಾ ಡೆವಲಪ್‌ಮೆಂಟ್‌ಗೆ ಎಷ್ಟು

ಹಣ ಕೊಡಬೇಕು ಅಷ್ಟನ್ನು ನಾವು ಕೊಟ್ಟಿದ್ದೇವೆ. ನಿಮ್ಮ ತಾಗೆ ಹೇಳಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಆಗ ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ತಾವು ಸ್ಥಾಪನೆ ಮಾಡಲಿಲ್ಲ. ನೀವು ಸ್ಥಾಪನೆ ಮಾಡಿದ್ದು ಹೈದ್ರಾಬಾದ್ ಅಭಿವೃದ್ಧಿ ಮಂಡಳಿಯನ್ನು ಮಾತ್ರ. ಮುಖ್ಯ ಮಂತ್ರಿಗಳ ಜೊತೆ ಏಕೆ ಮಾತನಾಡುತ್ತೀರಿ, ಬಾನ ಕೊಡುತ್ತೀರಾ ಈ ರೀತಿ ಮಾತನಾಡಿದರೆ ಏನು ಅರ್ಥ?

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಂಜೂರಾತಿ ಕೊಟ್ಟ ಮೇಲೆ ನೀವು ಬೇಕಾದರೆ ಕಡಿಮೆ ಖರ್ಚು ಮಾಡಿ, 12 ಕೋಟಿ ಇದ್ದದನ್ನು ಏಳೂವರೆ ಕೋಟಿ ರೂಪಾಯಿಗಳನ್ನು ಮಾಡಿ, ನಮಗೆ ಚಿಂತೆ ಇಲ್ಲ. ಆದರೆ ನಿಮ್ಮ ಸಚಿವರು ಒಂದು ಸರಿಯಾದ ಅಂಕಿ-ಸಂಖ್ಯೆಗಳನ್ನು ಕೊಡುವುದಿಲ್ಲ. ಅಧಿಕಾರಿಗಳು ಬಂದು ಇಲ್ಲಿ ಬ್ರೀಫ್ ಮಾಡುವುದಿಲ್ಲ ಎಂದರೆ ಇದಕ್ಕಿಂತ ಅಸಹಮಾನ ಇನ್ನೊಂದು ಇಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಈಗ ಒಂದು ಲಿಸ್ಟ್ ಬಂದಿದೆ, ಏಳು ಕೋಟಿ ನಲವತ್ತು ಲಕ್ಷ ರೂಪಾಯಿಗಳನ್ನು 1997-98ನೇ ಬಜೆಟ್ ಪ್ಲಾನ್ ಮಾಡಿಕೊಂಡಿರುವುದು. ಆದರಲ್ಲಿ 555 ಲಕ್ಷ ರೂಪಾಯಿಗಳನ್ನು ಈಗಾಗಲೇ ಹಣಕಾಸಿನ ಇಲಾಖೆಯಿಂದ ಬಿಡುಗಡೆಯಾಗಿದೆ. ಉಳಿದ 35 ಕೋಟಿ ರೂಪಾಯಿಗಳನ್ನು ಈ ವಾರದೊಳಗೆ ಬಿಡುಗಡೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಖರ್ಚಿನ ವಿವರವನ್ನು ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ :- ಖರ್ಚಿನ ವಿವರ ಈಗ ನಮ್ಮ ಹತ್ತಿರ ಇಲ್ಲ. 555 ಲಕ್ಷ ಮತ್ತು 35 ಲಕ್ಷ ರೂಪಾಯಿಗಳು ಸೇರಿ ಹೆಚ್ಚು ಕಡಿಮೆ 6 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ ಹಾಗೆ ಆಯಿತು. ಇಲ್ಲಿಯವರೆಗೆ ಬಜೆಟ್ ಪ್ರಾವಿಜನ್ 98-99ಕ್ಕೆ 13 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಹಿಂದಿಗಿಂತ ಈ ಸಾರಿ ಹೆಚ್ಚಿಗೆ ಇಟ್ಟಿದ್ದೇವೆ. ಈಗಾಗಲೇ 7 ಕೋಟಿ 40 ಲಕ್ಷ ರೂಪಾಯಿಗಳಲ್ಲಿ 555 ಲಕ್ಷ ರೂಪಾಯಿಗಳನ್ನು ಹಣಕಾಸಿನ ಇಲಾಖೆಯಿಂದ ಬಿಡುಗಡೆ ಮಾಡಲಾಗಿದೆ. ಖರ್ಚು ಆಗಿರುವ ಹಣದ ಬಗ್ಗೆ ನಮ್ಮ ಹತ್ತಿರ ಈಗ ವಿವರಣೆ ಇಲ್ಲ ವಿವರವನ್ನು ತರಿಸಿಕೊಂಡು ಹೇಳುತ್ತೇನೆ.

ಶ್ರೀ ಬಿ. ಎಸ್ . ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಬಯಲು ಸೀಮೆಯ ಶಾಸಕರು ಇಲ್ಲ ನಿಂತಿದ್ದಾರೆ, ನೀವು 7 ಕೋಟಿ ಅಥವಾ 8 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತೀರಿ, ಆದರಲ್ಲಿ ಆಗಿರುವ ಕೆಲಸದ ಬಗ್ಗೆ ತಮ್ಮ ಗಮನಕ್ಕೆ ಬಂದಿರಬೇಕಲ್ಲಾ, ಇಲ್ಲಾ ನೀವು ಅಧಿಕಾರಿಗಳ ಜೊತೆ ಸೇರಿಕೊಂಡು ಬಿಡುಗಡೆ ಆಗಿದೆ, ಖರ್ಚು ಆಗಿದೆ ಎಂದು ಹೇಳುತ್ತಿದ್ದಿರೋ ಏನೂ ಗೊತ್ತಿಲ್ಲ. ಸಂಬಂಧಪಟ್ಟ ಶಾಸಕರು ಟಾರ್ಜನಲ್ಲಿ ಇದ್ದಾರೆ ಎಂದರೆ, ಅವರು ಹೇಗೆ ಕೆಲಸ ಮಾಡುವುದು?

ಶ್ರೀ ಬಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೆ, ಈ ಹಣಕ್ಕೆಲ್ಲ ಇಂಪ್ಲಿಮೆಂಟ್ ಆಫೀಸರ್ ಇರುತ್ತಾರೆ. ಇದು ಜಿಲ್ಲಾಪಂಚಾಯತ್ ಮೂಲಕ ನಡೆಯುತ್ತದೆ. ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಡಿ.ಡಿ. ಮೂಲಕ ಸಂಬಂಧಪಟ್ಟ ಅಧಿಕಾರಿಗಳು ಮೊದಲು ಎಷ್ಟಿಮೇಟ್ ಕಳುಹಿಸುತ್ತಾರೆ. ಆ ಎಷ್ಟಿಮೇಟ್‌ಗೆ ಮಂಜೂರಾತಿಯನ್ನು ನೀಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಆ ಪ್ರೋಗ್ರಾಂ ಮಂಜೂರು ಆಗಬೇಕಾಗಿತ್ತು, ಆದರೆ ಆಗಿಲ್ಲ.

ಶ್ರೀ ಸಿ. ಬೈರೇಗೌಡ :- ಮಂಜೂರು ಆಗಿದೆ.

(ಗೊಂದಲ)

ಶ್ರೀ ಬೈರೇಗೌಡ :- ಮಾನ್ಯ ಅಧ್ಯಕ್ಷರೆ, ಆಕ್ಷನ್ ಪ್ಲಾನ್ ಮಂಜೂರು ಆಗಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಬೈರೇಗೌಡ ನೀವು ಎಷ್ಟು ಭರವಸೆ ಕೊಡಿ, ನಿಜವಾಗಿಯೂ ಈ ಕಾರ್ಯಕ್ರಮವನ್ನು ಅಪ್ರೂವಲ್ ಮಾಡಿ ಮಾರ್ಚ್ 31ರ ಒಳಗಡೆ ಐಳುವರೆ ಕೋಟಿನೋ ಅಥವಾ ಎಂಟು ಕೋಟಿಯೋ ಅದು ಎಷ್ಟು ಇದೆ, ಅದನ್ನು ವಿತರಣೆ ಮಾಡಲು ಬಿಡುಗಡೆ ಮಾಡುತ್ತೇವೆ ಎಂದು ಹೇಳಿಬಿಡಿ ಸಾಕು.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೆ, ಈ ಕ್ರಿಯಾ ಯೋಜನೆಯನ್ನು ತಯಾರು ಮಾಡಿರತಕ್ಕಂತಹ ಮಂಡಳಿಯು ಮಂಜೂರಾಗಿ ನೀಡಿದೆ, ಈ ಯೋಜನೆ ಮಂಜೂರು ಆಗಿದೆ. ಇದಕ್ಕೆ ಕೆಲವು ಕಡೆ ಹಣ ಬಿಡುಗಡೆ ಆಗಿದೆ, ಕೆಲಸವು ನಡೆದಿದೆ. ಈಗ ಬಿಡುಗಡೆ ಆಗಬೇಕಾಗಿರುವುದು ಒಂದೂವರೆ ಕೋಟಿ ರೂಪಾಯಿಗಳು ಮಾತ್ರ. ಅದರಲ್ಲಿ ಎಷ್ಟು ಹಣ ಹೆಚ್ಚಿಗೆ ಬಿಡುಗಡೆ ಮಾಡಲು ಸಾಧ್ಯವೋ ಅದನ್ನು ಮಾಡುವುದಕ್ಕೆ ನಾನು ಸಹ ಹಣಕಾಸಿನ ಮಂತ್ರಿಗಳ ಹತ್ತಿರ ಮಾತನಾಡುತ್ತೇನೆ, ಇವರೆಲ್ಲರನೂ ಕರೆದುಕೊಂಡು ಹೋಗಿದ್ದೆ, ನಮ್ಮ ಮನೆಯಲ್ಲಿಯೇ ಊಟದ ವ್ಯವಸ್ಥೆಯನ್ನು ಮಾಡಿದ್ದೆ.

(ಗೊಂದಲ)

ಹೆಚ್ಚು ಹಣ ಬಿಡುಗಡೆ ಮಾಡಿಸುವಲ್ಲಿ ನಾನು ಪ್ರಾಮಾಣಿಕವಾದ ವೈಯಕ್ತಿಕ ಪ್ರಯತ್ನವನ್ನು ಮಾಡಿದ್ದೇನೆ. ಈಗ ಬಾಕಿ ಇರುವ ಒಂದೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸುವಲ್ಲಿ ನಾನು ಮಾನ್ಯ ಹಣಕಾಸಿನ ಮಂತ್ರಿಗಳ ಮೇಲೆ ವೈಯಕ್ತಿಕ ಪ್ರಭಾವವನ್ನು ಬೀರಿ ಹಣ ಬಿಡುಗಡೆ ಮಾಡಿಸಲು ಪ್ರಯತ್ನ ಮಾಡುತ್ತೇನೆ. ಮತ್ತು ಶ್ರೀ ಪ್ರಕಾಶ್‌ರವರು ತಮ್ಮ ಪ್ರಯತ್ನವನ್ನು ಬೀರಿ ಹಣ ಬಿಡುಗಡೆ ಮಾಡಿಸಲು ಪ್ರಯತ್ನ ಮಾಡುತ್ತೇನೆ. ಮತ್ತು ಶ್ರೀ ಪ್ರಕಾಶ್‌ರವರು ತಮ್ಮ ಪ್ರಯತ್ನವನ್ನು ಮಾಡುತ್ತಾರೆ, ಎನ್ನುವ ಭರವಸೆಯನ್ನು ನೀಡುತ್ತೇನೆ. ಈಗ ತಾವು ಸ್ವಸ್ಥಾನಕ್ಕೆ ಮರಳಬೇಕು ಎಂದು ನಾನು ತಮ್ಮ ಮೂಲಕ ಅವರನ್ನು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು :- ಈ ಪ್ರಶ್ನೋತ್ತರ ವೇಳೆ ಮುಗಿಯಿತು, ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ದಿನದ ಲಿಖಿತ ಮೂಲಕ ಉತ್ತರಿಸುವ ಐಳನೇ ಪ್ರಶ್ನೆಗಳ ಪಟ್ಟಿಯಲ್ಲಿಯ ಒಟ್ಟು 126 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಇಡುತ್ತೇನೆ.